**ಓ.ಎಸ್. – 121/2015**

**ಡಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 28.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ಆರ್.ಎಂ. ವಕೀಲರಿಂದ**

1. ಶಿರವಾಳ ಗ್ರಾಮದ ಸರ್ವೇ ಸಂಖ್ಯೆ 41/7 ರ ಕ್ಷೇತ್ರ 3 ಎಕರೆ 25 ಗುಂಟೆ ಸ್ವತ್ತಿನಲ್ಲಿ ದಾವಾ ಸ್ವತ್ತು ಒಂದು ಭಾಗವಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು ಅಸ್ತಿತ್ವದಲ್ಲಿರುವ ಗ್ರಾಮವು ಸಾಗರ ನಗರಕ್ಕೆ ಬಹಳ ಸಮೀಪವಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಎದುರುಗಡೆ ಹುಚ್ಚಪ್ಪ ರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಮನೆಯಲ್ಲ, ಖಾಲಿ ಜಾಗವಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಎದುರುಗಡೆ ಸರೋಜ ಹಾಗೂ ವಾದಿಯ ಮನೆ ಇದೆ. ದಾವಾ ಸ್ವತ್ತಿನ ಆಸುಪಾಸಿನಲ್ಲಿ ಎಲ್ ಐ ಸಿ ವಿನಯ್ ಮತ್ತು ಭಗೀರಥರವರ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿಲ್ಲದ ಕಾರಣ ದಾವಾ ಸ್ವತ್ತಿನ ಆಸುಪಾಸಿನಲ್ಲಿ ಯಾರಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತಿನ ಆಸುಪಾಸಿನಲ್ಲಿ ಸುಮಾರು ಮನೆಗಳಿರುತ್ತವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನಿವೇಶನಗಳಾಗಿ ಮಾರ್ಪಡಿಸುವ ಸ್ವತ್ತು ಎಂದರೆ ಸಾಕ್ಷಿಯು ನಾವು ಅದನ್ನು ಕೃಷಿಗಾಗಿ ಗುಂಟೆ ಲೆಕ್ಕದಲ್ಲಿ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರಸ್ತುತ ಯಾವುದೇ ಬೆಳೆಯನ್ನು ನಾವು ಬೆಳೆದಿರುವುದಿಲ್ಲ. ದಾವಾ ಸ್ವತ್ತು ವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸ್ವಾಧೀನದಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವು ಎಂದಿಗೂ ಇರದೇ ಇದ್ದರೂ ಇದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತು ಇರುವ ಜಾಗ ವಾಸಿಸುವ ಬಡಾವಣೆಯಾಗಿ ಮಾರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ದಾವಾ ಸ್ವತ್ತಿರುವ ಜಾಗಗಳು ಕಂದಾಯ ನಿವೇಶನಗಳಾಗಿ ಮಾರಾಟವಾಗುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ನಾವು ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಗುಂಟೆಗೆ 3 ಲಕ್ಷ ದಂತೆ ಮಾರಾಟವಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಾವು ಕ್ರಯಪತ್ರದಲ್ಲಿ ಬರೆಸಿರುವ ದಾವಾ ಸ್ವತ್ತಿನ ಕ್ರಯದ ಪ್ರತಿಫಲ ಮೊತ್ತವು ಮಾರುಕಟ್ಟೆ ಮೌಲ್ಯಕ್ಕಿಂತ ತೀರ ಕನಿಷ್ಟವಾಗಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ನಾವು ಕ್ರಯಕ್ಕೆ ತೆಗೆದುಕೊಳ್ಳುವ ಸಮಯದಲ್ಲಿದ್ದ ಮಾರುಕಟ್ಟೆ ಮೌಲ್ಯವನ್ನೇ ದಾವಾ ಸ್ವತ್ತಿಗೆ ಪಾವತಿಸಿ ದಾವಾ ಸ್ವತ್ತನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಅಂದಿನ ಮಾರುಕಟ್ಟೆ ಬೆಲೆಯ ಪ್ರತಿಫಲ ಮೊತ್ತವನ್ನು ಪಾವತಿಸಿ ಖರೀದಿಸಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ನಾವು ದಾವಾ ಸ್ವತ್ತನ್ನು ಖರೀದಿಸಿದ ಸಂದರ್ಭದಲ್ಲಿ ದಾವಾ ಸ್ವತ್ತಿನ ಪ್ರತಿಫಲ ಮೊತ್ತವನ್ನು ವಾದಿಗೆ ಖಾತೆಯ ಮೂಲಕ ವರ್ಗಾಯಿಸಲು ಯಾವುದೇ ತೊಂದರೆ ಇರಲಿಲ್ಲ, ಆದರೆ ಅವರು ನಗದಾಗಿ ಹಣವನ್ನು ನೀಡಿ ಎಂದು ಕೇಳಿದ ಕಾರಣ ನಾವು ನಗದಾಗಿ ಅವರಿಗೆ ಪ್ರತಿಫಲ ಮೊತ್ತವನ್ನು ನೀಡಿರುತ್ತೇವೆ. ವಾದಿ ಪ್ರತಿಫಲ ಮೊತ್ತವನ್ನು ನಗದಾಗಿ ಕೇಳಿದರು ಎಂಬ ವಿಷಯವನ್ನು ಕ್ರಯಪತ್ರದಲ್ಲಿ ಬರೆಸಿರುವುದಿಲ್ಲ. ಕ್ರಯದ ಪ್ರತಿಫಲ ಮೊತ್ತವನ್ನು ನಾವು ವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿಸುವ ಮೊದಲು ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವೆಲ್ಲಾ ದಾಖಲೆಗಳನ್ನು ಪರಿಶೀಲಿಸಲಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಕ್ರಯದ ವ್ಯವಹಾರದ ಪೂರ್ವದಲ್ಲಿ ನನ್ನ ಪತಿ 1 ನೇ ವಾದಿಯ ಆಧಾರ್ ಕಾರ್ಡ್ ಅನ್ನು ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕ್ರಯಪತ್ರಕ್ಕೆ ಅಗತ್ಯವಾದ ದಾಖಲೆಗಳನ್ನು 1 ನೇ ವಾದಿಯೇ ತಂದು ಕೊಟ್ಟಿರುತ್ತಾರೆ. ಯಾವ ಯಾವ ದಾಖಲೆಗಳನ್ನು ತಂದು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

4. 11 ಇ ನಕ್ಷೆಗೆ ಅರ್ಜಿಯನ್ನು ಸಲ್ಲಿಸಿದವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಪತಿ 1 ನೇ ವಾದಿಯ ಆಧಾರ್ ಕಾರ್ಡ್ ಅನ್ನು ಪಡೆದು 1 ನೇ ವಾದಿಯ ಹೆಸರಿನಲ್ಲಿ 11 ಇ ನಕ್ಷೆಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 11 ಇ ನಕ್ಷೆಗೆ ಅರ್ಜಿ ಕೊಟ್ಟಿದ್ದರ ವಿಷಯ ವಾದಿಯರಿಗೆ ತಿಳಿದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ನನಗೆ ಸುಮಾರು ವರ್ಷಗಳಿಂದ ಪರಿಚಯವಿರುತ್ತಾರೆ. 1 ನೇ ವಾದಿ ಕುಟುಂಬ ಜವಾಬ್ದಾರಿಯನ್ನು ಹೊಂದಿದ ವ್ಯಕ್ತಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ಪ್ರತಿನಿತ್ಯವೂ ಮದ್ಯಪಾನ ಮಾಡುವ ಚಟವುಳ್ಳವರು ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ಅನಕ್ಷರಸ್ಥ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ 1 ನೇ ವಾದಿಯ ದುಶ್ಚಟ ಮತ್ತು ಅನಕ್ಷರತೆಯ ಲಾಭವನ್ನು ಪಡೆದು ದಾವಾ ಸ್ವತ್ತಿಗೆ ಸಂಬಂಧಿಸಿದ ಸುಳ್ಳಾದ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಮೇಲೆ ಇರುವ ಸಹಿಗಳು 3 ಮತ್ತು 4 ನೇ ವಾದಿಯರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ.

ಕ್ರಯಪತ್ರಕ್ಕೆ ಪದ್ಮರಾಜ ಮತ್ತು ಪುಟ್ಟಸ್ವಾಮಿ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.ಪದ್ಮರಾಜ ಮತ್ತು ಪುಟ್ಟಸ್ವಾಮಿ ನಮಗೆ ಪರಿಚಯದವರು. ಕ್ರಯಪತ್ರಕ್ಕೆ ವಾದಿಯರ ಕಡೆಯವರು ಯಾರೂ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ಸಾಮಾನ್ಯವಾಗಿ ಒಂದು ಕರಾರಾಗಬೇಕಾದರೆ ಇಬ್ಬರು ಪಕ್ಷಗಾರರು ಒಪ್ಪಬೇಕು ಎಂದರೆ ಸರಿ. ದಾವಾ ಸ್ವತ್ತಿನ ಕ್ರಯಪತ್ರದ ಮಾಹಿತಿ 2 ರಿಂದ 4 ನೇ ವಾದಿಯರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಕ್ರಯಪತ್ರದಲ್ಲಿರುವ ಪ್ರತಿಫಲ ಮೊತ್ತವನ್ನು ವಾದಿಯರಿಗೆ ಪಾವತಿಸಿಲ್ಲ ಹಾಗೂ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಎಂದೂ ಸಹ ಹೋಗಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಸುಳ್ಳಾಗಿ ಸೃಷ್ಟಿಸಲಾಗಿದೆ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ